> ಮಿಂಚಿ ಹೋಯ್ತು ಕಾಲ. ರಾಧತ್ತೆಯ ಜೀವಮಾನದ ಶ್ರಮವೆಲ್ಲಾ ಅವಳ ಬದುಕನ್ನು ಹಾಳುಗೆಡವಿದವರ ಪಾಲಾಗುತ್ತದೆ ಅಂದರೆ ಇದಕ್ಕಿಂತಾ ದುರಂತ ಮತ್ತೇನಿರಲು ಸಾಧ್ಯ?

"ಏನಂತಿದಾರೆ ನೋಡೋ ಮಾಧವ, ರಾಧಕ್ಕನ ಸ್ವಯಾರ್ಜಿತ ಆಸ್ತಿ ಇವರಿಗೆ ಸೇರ್ಬೇಕಂತೆ. ಹಕ್ಕುದಾರರು ಇವರೇ ಅಂತೆ..."

"ಹಾಗಂತ ನಾವೆಲ್ಲಿ ಹೇಳ್ತಿರೋದು, ಕಾನೂನು..." ಅಂದರು ಒಬ್ಬರು. ಮಾಧವನಿಗೆ ರುಮ್ಮನೆ ರಕ್ತ ನೆತ್ತಿಗೇರಿದಂತಾಯ್ತು.

"ಯಾವೂರ ಕಾನೂನು ಮಾತಾಡ್ತಿದೀರ್ರೀ? ಇದೀಯಾ, ಸತ್ತಿದೀಯಾ ಅಂತ ಇಷ್ಟು ವರ್ಷ ಕೇಳಿದೋರಿಲ್ಲ, ಈಗ ಆಸ್ತಿಗೆ ಬಾಯಿ ಬಿಟ್ಗಂಡು ಬಂದಿದಾರೆ. ನಾಚಿಕೆಯಾಗಲ್ವಾ ಜನ್ಮಕ್ಕೆ? ರಾಧತ್ತೆಯ ಸಂಪಾದನೇಲಿ ಒಂದು ಕುರುಡು ಕಾಸೂ ನಿಮಗೆ ದಕ್ಕೋಕೆ ಬಿಡಲ್ಲ, ತಿಳ್ಕಳಿ..."

"ಯಾವೂರ ದಾಸಯ್ಯ ಅಂತ ಕಾನೂನು ಮಾತಾಡ್ತಿದ್ದಿ? ನಾವು ಲಾಯರ್ ಹತ್ರ ಎಲ್ಲಾ ಕೇಳ್ಕಂಡೇ ಬಂದಿದೀವಿ. ಡೈವೋರ್ಸ್ ಆಗಿಲ್ಲ ಅಂದ್ಮೇಲೆ ಅವಳು ನಮ್ಮನೇಗೇ ಸೇರಿದೋಳು. ಗಂಡ ಇಲ್ದಿದ್ರೇನಾಯ್ತು, ಅವನ ಅಣ್ಣತಮ್ಮಂದ್ರು ನಾವಿದೀವಿ. ಅವನ ವಾರಸುದಾರರಿಗೆ ಸೇರ್ಬೇಕು ಆಸ್ತಿ..."

"ಹೋಗ್ ಹೋಗ್ರೀ. ಅವಳ ಆಸ್ತಿ ಎಲ್ಲಾ ನಮಗೇ ಸೇರ್ಬೇಕಾಗಿದ್ದು ಅಂತ ಸಾವಿರ ಸಲ ಹೇಳಿದಾಳೆ ರಾಧತ್ತೆ. ಬಂದ್ಬಿಟ್ರು ದೋಚ್ಕಕ್ಕೆ..." ಬಂದವರ ಮುಖ ಪೆಚ್ಚುಪೆಚ್ಚಾಯ್ತು.

"ಬಾಯಲ್ಲಿ ಸಾವಿರ ಹೇಳ್ಬೋದು. ಬರವಣಿಗೇಲಿ ಹೇಳಿದಾಳಾ ನಿನ್ನ ರಾಧತ್ತೆ? ಅದಿದ್ರೆ ತೋರ್ಸು..."

"ನಿಮ್ಹತ್ರ ಯಾಕೆ ತೋರಿಸ್ಬೇಕು? ಕಾನೂನು ನಿಮಗೊಬ್ರಿಗೇ ಗೊತ್ತಿರೋದಲ್ಲ" ಅಂದ ಮಾಧವ.

"ಆಯ್ತು ಹಂಗಾರೆ, ನೋಡ್ಕಳಾಣ.." ಬಂದವರು ಒಬ್ಬರ ಹಿಂದೊಬ್ಬರು ಎದ್ದು ಹೋದರು. ಕಾರು ಹೊರಟು ಹೋದ ಸದ್ದು ಕಿವಿಗೆ ಬೀಳುತ್ತಿದ್ದಂತೆ ಹೇಳಿದ ಮಾಧವ,

"ಗೊತ್ತಾಯ್ತಾ ಅಪ್ಪ? ರಾಧತ್ತೆ ವಿಲ್ ಏನಾದ್ರೂ ಮಾಡಿಟ್ಟಿದಾಳಾ ಅಂತ ಚೂಟಿ ನೋಡೋಕೆ ಬಂದಿದಾರೆ. ಗೊತ್ತಾಯ್ತಲ್ವಾ?" ಮಾಧವನ ದನಿ ಗೊಗ್ಗರಾಗಿತ್ತು. ಮನೆಯ ಉಳಿದ ಸದಸ್ಯರ ಮುಖ ಕಪ್ಪಿಟ್ಟು ಹೋಗಿತ್ತು.

"ಕೇಶವನಿಗೆ ಫೋನ್ ಮಾಡಿ ಹೇಳು. ಮನೆ ಖಾಲಿ ಮಾಡಿದ್ದು ಅವನೇ ಅಲ್ವಾ? ಏನಾದ್ರೂ ದಾಖಲೆ ಉಂಟಾ ವಿಚಾರ್ಸು..." ಅಪ್ಪ ಹೇಳಿ ಮುಗಿಸುವುದರೊಳಗೆ ಮಾಧವ ಮೊಬೈಲ್ ಕೈಗೆತ್ತಿಕೊಂಡಿದ್ದ.

★★★

'ತಲೆ ಬಿಚ್ಚಿ ಹಾಕಿಕೊಂಡು' ಅನ್ನುವಂತೆ ಮಾಧವ ರಾಧತ್ತೆಯ ಸರಕನ್ನೆಲ್ಲಾ ಜಾಲಾಡಿಸಿ ಸೋತು ಹೋದ. ತಲೆಯ ಮೇಲೆ ಕೈ ಹೊತ್ತುಕೊಂಡು ಕೂತ. ಅತ್ತ ಕೇಶವ ಕೂಡಾ ಈ ಕುರಿತಾಗಿ ನಕಾರಾತ್ಮಕ ಸುದ್ದಿ ತಲುಪಿಸಿದ. ರಾಧತ್ತೆಯ ಆಸ್ತಿಯ ಮೇಲೆ ಯಾವ ಮೋಹ ಇಲ್ಲವೆಂದು ಎದೆ ತಟ್ಟಿಕೊಂಡು ಹೇಳಿದ್ದರೂ ಕೋಟಿಗಟ್ಟಲೆ ಆಸ್ತಿ ಅವಳ ಬದುಕನ್ನು ಹಾಳುಗೆಡವಿದವರ ಪಾಲಾಗುವುದು ಯಾರಿಗೂ